Q.P. Code – 50226

# ದ್ವಿತೀಯ ಬಿ.ಎ. ಪದವಿ ಪರೀಕ್ಷೆ

## ಸೆಪ್ಟೆಂಬರ್/ಅಕ್ಟೋಬರ್ 2013

## (ದೂರ ಶಿಕ್ಷಣ)

## ಕನ್ನಡ ಐಚ್ಛಿಕ ಪತ್ರಿಕೆ – ೨

## (DAB 430) – ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು
## (ಹರಿಶ್ಚಂದ್ರ ಕಾವ್ಯ ಸಂಗ್ರಹ, ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ)

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿರಿ : **5**

(೧) ಪೊೞಿಮಡುವ ಭೂಪಾಲನಂ ಕಂಡು ಕಂಗೆಟ್ಟು

ಮಱುಗಿ ಬಸುಱಂ ಹೊಸೆದು ಬಸವಳಿದು ಬಿಸುಸುಯ್ದು

ಮೊಱೆಯಿಟ್ಟು ಬಾಯ್ವಿಟ್ಟು ಕೈ ನೀಡಿ ಕರೆದು ಕಟ್ಟೊಱಲಿ ಸೈರಿಸಲಾಱದೆ।

ನೆಱೆ ನಿನ್ನ ನಂಬಿ ನಚ್ಚಿರ್ದ ಪರಿವಾರವಂ

ಮಱೆದೆಯೋ ತೊಱೆದೆಯೋ ಮಾಱಿದೆಯೋ ಪೇಳು ನೇ

ಸಱ ಕುಲಜ ಎಂದೆಂದು ನುಡಿನುಡಿದು ಮಿಡಮಿಡನೆ ಮಿಡುಕಿತ್ತು ಪೌರಜನವು॥

(೨) ಎಲ್ಲಿಯೂ ನಿಲ್ಲದಿರು;

ಮನೆಯನೆಂದೂ ಕಟ್ಟದಿರು

ಕೊನೆಯನೆಂದೂ ಮುಟ್ಟದಿರು

ಓ ಅನಂತವಾಗಿರು।

ಓ ನನ್ನ ಚೇತನ,

ಆಗು ನೀ ಅನಿಕೇತನ!

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

ದಂತಿ, ಹುಸಿ, ವಿಪಿನ, ಬಟ್ಟೆ, ತನಯ, ಅನಂಗ, ಗೇಹ, ತೃಣ, ಅಗ್ರೋದಕ, ಚೈತ್ಯಾಕ್ಷಿ, ಮಲರ್, ಚಾರು.

(ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **2 × 2 = 4**

(೧) ನಕ್ಷತ್ರಿಕ

(೨) ಅಂದ್ರಿಯಾ

(೩) ಯಂತ್ರರ್ಷಿ

Q.P. Code – 50226

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ

(೨) ನೇಮಕ್ಕೆ ನೀನಿರಾಂ ಬಂದು ಕಾಡುವೆನೆಂದನು

(೩) 'ಪಕ್ಷಿ? ಅಲ್ತಲ್ತಾ ತರುಚೇತನ ಚೈತ್ಯಾಕ್ಷಿ'

(೪) ಮುಳ್ಳಿಲ್ಲದೆ ಗುಲಾಬಿ ಇಲ್ಲ, ಪಾದ್ರಿಗಳಿಲ್ಲದೆ ರಾಜರಿಲ್ಲ

(೫) ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು

(೬) ಸೂರ್ಯನೆ ನಿಂತಿದೆ, ಭೂಮಿ ಸುತ್ತುತಿದೆ, ಅವಳೇ ತಿರಿಗಾಲ

(೭) ನೂರು ದೇವರನೆಲ್ಲಾ ನೂಕಾಚೆ ದೂರ.

(೮) ಏಕೆ ಕಚ್ಚಿತ್ತಾವ ಕಡೆ ಯಾವ ಹೊಲನಕ್ಕಟಾ......

3. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಸತ್ಯ ಮತ್ತು ಕುಲನಿಷ್ಠೆಗಳ ನಡುವಿನ ಸಂಘರ್ಷಕ್ಕೆ ಸಿಲುಕಿದ ಹರಿಶ್ಚಂದ್ರನ ವ್ಯಕ್ತಿತ್ವ ವಿಕಾಸಗೊಳ್ಳುವ ಪರಿಯನ್ನು ಚರ್ಚಿಸಿರಿ.

(೨) ಲೋಹಿತಾಶ್ವನ ಸಾವಿಗೆ ಪ್ರಲಾಪಿಸುವ ಚಂದ್ರಮತಿಯ ದುಃಖದ ಪ್ರಸಂಗವನ್ನು ವರ್ಣಿಸಿರಿ.

(ಆ) ಯಾವುದಾದರೂ **ಒಂದನ್ನು** ಕುರಿತು ಬರೆಯಿರಿ : **5**

(೧) ಹೊಲತಿಯರು ಮತ್ತು ಹರಿಶ್ಚಂದ್ರನ ನಡುವಿನ ಸಂಭಾಷಣೆಯ ಸ್ವಾರಸ್ಯ.

(೨) ವಿಶ್ವಾಮಿತ್ರನಿಗೆ ರಾಜ್ಯ ಸರ್ವಸ್ವವನ್ನು ಒಪ್ಪಿಸಿಕೊಟ್ಟ ಪ್ರಸಂಗ.

4. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಕುವೆಂಪು ಅವರ ಕವನಗಳಲ್ಲಿ ಅಭಿವ್ಯಕ್ತವಾಗಿರುವ ವೈಚಾರಿಕತೆಯ ಪ್ರಮುಖ ಅಂಶಗಳನ್ನು ಚರ್ಚಿಸಿ.

(೨) ಶೂದ್ರಪ್ರಜ್ಞೆ, ಶ್ರಮ ಮತ್ತು ಉತ್ಕೃಷ್ಟ ಬದುಕಿನ ಜೀವಾಳವಾಗಿ ಕಾಣುವ 'ಗೊಬ್ಬರ' ಕವನದ ಆಶಯವನ್ನು ವಿವರಿಸಿ.

(ಆ) ಯಾವುದಾದರೂ **ಒಂದನ್ನು** ಕುರಿತು ಬರೆಯಿರಿ : **5**

(೧) 'ತನುವು ನಿನ್ನದು' ಕವನದಲ್ಲಿ ವ್ಯಕ್ತವಾದ ಸಮರ್ಪಣಾ ಭಾವ.

(೨) 'ಕಲ್ಕಿ' ಕವನದಲ್ಲಿ ವ್ಯಕ್ತವಾದ 'ಸಮತಾವಾದ'ದ ದೃಷ್ಟಿಕೋನ.

**Q.P. Code – 50226**

5. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ವಿಜ್ಞಾನಿಗಳ ಸಾಮಾಜಿಕ ಹೊಣೆಗಾರಿಕೆಯನ್ನು ಎಚ್ಚರಿಸುವುದೇ 'ಗೆಲಿಲಿಯೋ' ನಾಟಕದ ಪ್ರಧಾನ ಉದ್ದೇಶವಾಗಿದೆ – ಚರ್ಚಿಸಿರಿ.

(೨) 'ಭೂ ಕೇಂದ್ರ ಸಿದ್ಧಾಂತ'ವೆಂದರೇನು? ವಿವರಿಸಿರಿ.

(ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **5**

(೧) ಮಿಸೆಸ್ ಸಾರ್ಲೆ – ಪಾತ್ರವನ್ನು ವಿವರಿಸಿರಿ.

(೨) ಗೆಲಿಲಿಯೋ ಮತ್ತು ಸ್ಯಾಗ್ರಡೋ ನಡುವಿನ ಸಂಭಾಷಣೆಯ ಸ್ವಾರಸ್ಯವೇನು?

(**80** ಅಂಕಗಳ ಸ್ಕೀಮ್‌ನವರಿಗೆ **ಕಡ್ಡಾಯ** ಪ್ರಶ್ನೆ) :

6. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿರಿ : **10**

(೧) ಹರಿಶ್ಚಂದ್ರನು ತನ್ನ ಮಡದಿ ಮತ್ತು ಮಗನನ್ನು ಹಾಗೂ ತನ್ನನ್ನು ಮಾರಿಕೊಂಡ ಪ್ರಸಂಗವನ್ನು ವಿವರಿಸಿ.

(೨) ಕುವೆಂಪು ಅವರ ಪ್ರಣಯ ಕವನಗಳಲ್ಲಿ ವ್ಯಕ್ತವಾಗಿರುವ ಸೌಂದರ್ಯಪ್ರಜ್ಞೆಯ ವೈಶಿಷ್ಟ್ಯವನ್ನು ಗುರುತಿಸಿರಿ.